ನೆಲೆಯಲ್ಲೇ ವಿವರಿಸಿದರೂ ಅದು ಅಂತ್ಯದಲ್ಲಿ ನಿಜವೆನಿಸುತ್ತದೆ. ಈ ಅರ್ಥದಲ್ಲಿಯೇ ಭಾರತೀಯ ಪರಂಪರೆ ಯಾವುದೇ ನಂಬಿಕೆ, ಕಲ್ಪನೆಗಳ ಕಥಾನಕಗಳನ್ನು ಗೌರವದಿಂದಲೇ, ಶ್ರದ್ಧೆಯಿಂದಲೇ ಸ್ವೀಕರಿಸಿಬಿಟ್ಟಿದೆ. ಹೀಗಾಗಿ ಲಕ್ಷ್ಮೀಶನು ತನ್ನ ಕಾವ್ಯದಲ್ಲಿ ತರುವ ಯುದ್ಧವಿವರಗಳಿಗಿಂತಲೂ, ಪವಾಡ ಮಾದರಿಯ ಕಥೆಗಳಿಗಿಂತಲೂ ಜೈಮಿನಿ ಭಾರತದಲ್ಲಿ ಬರುವ ಕೆಲವು ಕಥೆಗಳು ಬದುಕಿನ ವಾಸ್ತವಗಳಿಗೆ ಹಿಡಿದ ಕನ್ನಡಿಯಂತಿದೆ.

ತಂದೆಯ ಮಾತನ್ನು ಪರಿಪಾಲಿಸುವ ಮಗನ ಕಥೆ, ತಂದೆಯನ್ನೇ ಕೊಲ್ಲುವ ಮಗ, ಗಂಡನ ಮಾತನ್ನು ಎಳ್ಳನಿತೂ ಕೇಳದ ಹೆಂಡತಿ, ಪತಿಯ ಒಳಮರ್ಮದ ಆಜ್ಞೆಯನ್ನರಿಯದೇ ಕಾಡಿಗೆ ನಡೆಯುವ ಸತಿ ಶಿರೋಮಣಿ, ಗಂಡಸಿನ ಸಹವಾಸವೂ ಬೇಕು, ಅವನನ್ನು ಕೊಲ್ಲಲೂಬೇಕು ಎಂಬ ಹೆಂಗುಸರು, ಯುದ್ಧಕ್ಕೆ ಸನ್ನದ್ಧನಾಗುವ ಗಂಡನನ್ನು ತಡೆದು ತನ್ನೊಡನೆ ಒಂದು ರಾತ್ರಿ ಕಳೆಯಲು ಸಮಯವಿಲ್ಲವೇ ಎಂದು ಕೇಳುವ ಪ್ರಿಯಪತ್ನಿ, ಯಾವುದೋ ಕಾಲದ ಸೇಡನ್ನು ನೆನಪಿನಲ್ಲಿರಿಸಿಕೊಂಡು ಅದನ್ನು ವರ್ತಮಾನದಲ್ಲಿ ತೀರಿಸಿಕೊಳ್ಳುವ ರಾಕ್ಷಸ ಸ್ವರೂಪಿಗಳು ಇಷ್ಟೆಲ್ಲ ಕಥೆ ಜೈಮಿನಿ ಭಾರತದಲ್ಲಿ ಕಾಣಿಸಿಕೊಂಡ ನಂತರ, ಕಡೆಯದಾಗಿ ತೋರಿ ಬರುವ ಒಂದು ಮುಖ್ಯ ಕಥೆಯಿದೆ. ಅದು ವಿಧಿವಾದಕ್ಕೆ ಸಂಬಂಧಿಸಿದ ಚಂದ್ರಹಾಸನ ಕಥೆ.

ಜಗತ್ತಿನ ಎಲ್ಲ ಪ್ರಮುಖ ಲೇಖಕರೂ ಈ ವಿಧಿವಾದವನ್ನು ಒಪ್ಪಿಕೊಂಡಿರುವುದಿದೆ. ಲಕ್ಷ್ಮೀಶನು ಜೈಮಿನಿ ಭಾರತದಲ್ಲಿ ಆರಂಭಕ್ಕೆ ಹೇಳುವ ಕಥೆಗಳನ್ನೆಲ್ಲ ಹೇಳಿ ಕಡೆಯ ಭಾಗದಲ್ಲಿ ಚಂದ್ರಹಾಸನ ಕಥೆಯನ್ನು ತರಲಾಗಿದೆ. ಇದು ಕಾವ್ಯದಲ್ಲಿ 28ನೆಯ ಸಂಧಿಯಿಂದ 30ನೆಯ ಸಂಧಿಯವರೆಗೆ ಹಬ್ಬಿಕೊಂಡಿದೆ. ಈ ಕಥನ ಭಾಗವೂ ಕೂಡ ಓದುಗರಿಗೆ ಪ್ರಿಯವಾದುದೇ. ಚಂಡಿ–ಉದ್ದಾಲಕರ ಕಥೆ, ಶ್ರೀಕೃಷ್ಣ ಸುಧನ್ವರ ಕಾಳಗ, ಸ್ತ್ರೀಯರೊಡತಿ ಪ್ರಮೀಳೆಯ ಕಥೆ, ಅರ್ಜುನ ಬಭ್ರುವಾಹನರ ಯುದ್ಧ, ಸೀತಾಪರಿತ್ಯಾಗ ಕಡೆಗೆ ಚಂದ್ರಹಾಸನ ವೃತ್ತಾಂತ ಇವುಗಳೆಲ್ಲ ಕನ್ನಡ ಓದಿನ, ಬಯಲಾಟದ ಮತ್ತು ಯಕ್ಷಗಾನ ಪರಂಪರೆಗಳಲ್ಲಿ ಸೇರಿಕೊಂಡುಬಿಟ್ಟಿವೆ. ಪುರುಷ ಪಾರಮ್ಯದ ಸಮಾಜ ಜ್ವಾಲೆ ಮತ್ತು ಚಂಡಿಯರ ಕಥೆಯನ್ನು ಜನ ಕೇಳಲಿಚ್ಛಿಸಿದರೂ ಅದನ್ನು ನಾಟಕವಾಡಿ ಪ್ರದರ್ಶನಕ್ಕಿಡಲು ಇಷ್ಟಪಡುವಂತೆ ತೋರುವುದಿಲ್ಲ. ಲಕ್ಷ್ಮೀಶನಾದರೆ ಗಂಡೆದೆಯ, ಪತಿವ್ರತೆಯ ಕಥೆಗಳನ್ನು ಹೇಳುವಂತೆಯೇ ಚಂಡಿಯ ಹಟಮಾರಿ ಪ್ರವೃತ್ತಿಯ ಕಥೆಯನ್ನು ತುಂಬ ಸಮರ್ಥವಾಗಿಯೇ ನಿರೂಪಿಸುತ್ತಾನೆ. ಉದ್ದಾಲಕನು ಹೆಂಡತಿಗೆ 'ಎನ್ನ ಪರಿಚರ್ಯೆಗನುಕೂಲೆಯಾಗಿರ್ದು ಮನೆವಾಳ್ತೆಯಂ ಸಾಗಿಪುದು ನೀನೆಂದೊಡೆ' ಚಂಡಿ ಕೊಡುವ ಉತ್ತರ ಹೀಗಿದೆ–

ಎಳ್ಳನಿತು ನಿನ್ನ ಮಾತಂ ಕೇಳ್ವಳೆಂದೆಣಿಕೆ
ಗೊಳ್ಳದಿರ್ಪರಿಚರ್ಯೆ ಮನೆವಾಳ್ತೆಯೆಂದೆಂಬ
ತಳ್ಳಿಯವಳಲ್ಲ ನೀನೆಂದುದಂ ಮಾಡೆನೆಂದಾ ಚಂಡಿ ಚಂಡಿ ಪೋರೆ
ಮುಳ್ಳಿಡಿದ ಮರವೇರಿದಂತಾದುದಿಹಪರಕೆ
ದೂಳ್ಳಿತಾದಪುದೆ ಬಂದುದು ತಪೋಹಾನಿಯೆಂ
ದಳ್ಳೆಯೊಳ್ಕೋಲ್ಗೊಂಡ ತೆರದೊಳುದ್ದಾಲಕಂ ಚಿಂತಿಪಂ ಪ್ರತಿದಿನದೊಳು||

ಪಾತಿವ್ರತ್ಯವೇ ಮೋಕ್ಷಕ್ಕೆ ದಾರಿ ಎಂದುಕೊಂಡಿದ್ದ ಸಮಾಜ, ಹಾಗೆಯೇ ಬದುಕಿತೇ ಎಂಬ ಪ್ರಶ್ನೆಯು ಇಲ್ಲಿ ಮುಖ್ಯವಾದುದು. ಯಾಕೆಂದರೆ ಜನಪದ ಗೀತ ಸಂಕಲನ 'ಗರತಿಯ ಹಾಡು' ತ್ರಿಪದಿಗಳಲ್ಲಿ ಅಷ್ಟೆಲ್ಲ ಆದರ್ಶಗಳನ್ನು ಹೇಳುವ ಹೆಣ್ಣು ಮಕ್ಕಳು ಅದನ್ನು ದಾಟುವ ಸಂಗತಿಯ ಹಾಡುಗಳನ್ನೂ